
# ಕಲ್ಯಾಣ ಕದಳಿ

## ಮಹಿಳಾ ಸಮಾವೇಶದ ಸ್ಮರಣ ಸಂಪುಟ



ಪ್ರಧಾನ ಸಂಪಾದಕರು

**ಡಾ. ಶಾಂತಾ ಬಿ. ಅಸ್ಟಿಗೆ**

ಸಂಪಾದಕರು

**ಡಾ. ನೀಲಾಂಬಿಕಾ ಪೊಲೀಸಪಾಟೀಲ**

**ಡಾ. ಶರಣಬಸಪ್ಪ ವಡ್ಡನಕೇರಿ**



KALYANA KADALI Mahila Samaveshada Smarana Samputa

Chief Editor : Dr. Shantha B. Astagi
Editors : Dr. Neelambika Police Patil
Dr. Sharanabasappa Vaddanakeri
Published by: Jilla Sharana Sahitya Parishat, Kalaburagi
Copyright : Publisher
First Editon: 2024 October
Price : 300
Pages : 254+24+32
Used paper : 1/8 dummy 90 Gsm maplitho
Copies: 1000
Cover Disign : Kriya Ramu
ISBN : 978-93-91457-35-8

ಕಲ್ಯಾಣ ಕದಳಿ (ಮಹಿಳಾ ಸಮಾವೇಶದ ಸ್ಮರಣ ಸಂಪುಟ)
ಪ್ರಧಾನ ಸಂಪಾದಕರು : ಡಾ. ಶಾಂತಾ ಬಿ. ಅಸ್ಟಿಗೆ
ಸಂಪಾದಕರು :
ಡಾ. ನೀಲಾಂಬಿಕಾ ಪೋಲೀಸ ಪಾಟೀಲ
ಡಾ. ಶರಣಬಸಪ್ಪ ವಡ್ಡನಕೇರಿ

ಪ್ರಕಾಶಕರು : ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು
ಹಕ್ಕುಗಳು: ಪ್ರಕಾಶಕರದ್ದು
ಪ್ರಥಮ ಮುದ್ರಣ: ೨೦೨೪ ಅಕ್ಟೋಬರ್

ಬೆಲೆ : ೩೦೦
ಪುಟಗಳು: ೨೫೪+೨೪+೩೨
ಪ್ರತಿಗಳು: ೧೦೦೦
ಮುಖಪುಟ ವಿನ್ಯಾಸ: ಕ್ರಿಯಾ ರಾಮು
ಮುಖಪುಟ ಚಿತ್ರ : ಡಾ. ಜಿ. ಎಸ್. ಖಂಡೇರಾವ್

ಮುದ್ರಣ :
ವಿಶ್ವಾಸ್ ಪ್ರಿಂಟರ್ಸ್
ಬೆಂಗಳೂರು

ಸೂಚನೆ : ಈ ಸಂಪುಟದಲ್ಲಿ ಪ್ರಕಟಗೊಂಡ ಲೇಖನಗಳಿಗೆ ಆಯಾ ಲೇಖಕರೇ ಹೊಣೆಗಾರರು. ಸಂಪಾದಕರು ಮತ್ತು ಪರಿಷತ್ತು ಹೊಣೆಗಾರರಲ್ಲ

## ಪರಿವಿಡಿ


೧. ಬಸವಣ್ಣನವರ ಕುಟುಂಬ ಪ್ರಜ್ಞೆ —ಡಾ.ಜಯಶ್ರೀ ದಂಡೆ ೧೧

೨. ಮೋಳಿಗೆ ಮಾರಯ್ಯ-ಮಹಾದೇವಿಯಮ್ಮನವರ ಆದರ್ಶ ದಾಂಪತ್ಯ — ಡಾ. ಅಶೋಕ ಕೋರೆ ೨೧

೩. ಅಮುಗೆ ದೇವಯ್ಯಗಳ ಪುಣ್ಯಸ್ತ್ರೀ ದಾಯಮ್ಮರ ದಾಂಪತ್ಯ — ಡಾ. ಗವಿಸಿದ್ದಪ್ಪ ಎಚ್.ಪಾಟೀಲ ೩೩

೪. ಉರಿಲಿಂಗ ಪೆದ್ದಿ ಮತ್ತು ಕಾಳವ್ವೆ ದಾಂಪತ್ಯ — ಡಾ. ಶೀಲಾದೇವಿ ಶಿವಲಿಂಗಪ್ಪ ಬಿರಾದಾರ ೩೯

೫. ಶರಣ ಗಜೇಶ ಮಸಣಯ್ಯ ಮತ್ತು ಶರಣೆ ಮಸಣಮ್ಮ ದಂಪತಿಗಳು — ಸಿದ್ಧರಾಮ. ಶಿ.ಯಳವಂತಗಿ ೪೯

೬ ಶಿವಶರಣ ಹರಳಯ್ಯನ ದಾಂಪತ್ಯ ಜೀವನ — ಶ್ರೀ ಅಂಬಾರಾಯ ಮಡ್ಡೆ ಕುರಿಕೋಟಾ ೫೭

೭ ಆಯ್ದಕ್ಕಿ ಮಾರಯ್ಯ ಮತ್ತು ಲಕ್ಕಮ್ಮ — ಡಾ. ಟಿ. ಆರ್. ಗುರುಬಸಪ್ಪ ೬೨

೮. ರಾಯಸದ ಮಂಚಣ್ಣ ಮತ್ತು ರಾಯಮ್ಮರ ದಾಂಪತ್ಯ —ಡಾ. ಕರುಣಾ ಜಮದರಖಾನಿ ೬೯

೯. ಕ್ರಾಂತಿ ಗಂಗೋತ್ರಿ ಅಕ್ಕ ನಾಗಮ್ಮ — ಪ್ರೇಮಕ್ಕ ಅಂಗಡಿ ೭೪

೧೦. ಶರಣೆ ಮೋಳಿಗೆ ಮಹಾದೇವಿ — ಪ್ರೊ. ಶಂಭುಲಿಂಗ ವಿ. ಕಾಮಣ್ಣ ೮೧

೧೧. ಹುಟ್ಟು ವಿರಾಗಿಣಿ ಧೂಪದ ಕಾಯಕದ ಶರಣೆ ಗೊಗ್ಗವ್ವೆ — ಡಾ. ರೇಖಾ ಪಾಟೀಲ ೮೬

೧೨. ವೈರಾಗ್ಯವನ್ನು ಅರಸಿದ ಬೊಂತಾದೇವಿ — ಶ್ರೀಮತಿ ಸುಧಾ ಹುಚ್ಚಣ್ಣವರ ೯೧

೧೩. ಉರಿಲಿಂಗ ಪೆದ್ದಿಗಳ ಪುಣ್ಯ ಸ್ತ್ರೀ ಕಾಳವ್ವೆಯ ವ್ರತ ಮತ್ತು ಕಾಯಕ ನಿಷ್ಠೆಯ ಆತ್ಮಾವಲೋಕನ — ಡಾ. ರಾಜೇಶ್ವರಿ ವೀ. ಶೀಲವಂತ ೯೫

೧೪. ದಸರಯ್ಯನ ಪುಣ್ಯಸ್ತ್ರೀ ವೀರಮ್ಮ — ಡಾ. ಶಾಂತಾ ಮಠ ೧೦೧

೧೫. ಅನುಭಾವದ ಬೆಳಕು ಮುಕ್ತಾಯಕ್ಕ — ಡಾ. ಉಷಾದೇವಿ ಹಿರೇಮಠ ೧೦೮

೧೬. ಸೂಳೆ ಸಂಕವ್ವೆ — ಡಾ. ಆಶಾರಾಣಿ ಎಂ. ಪಿ. ೧೧೩

## ಅನುಭಾವದ ಬೆಳಕು ಮುಕ್ತಾಯಕ್ಕ

ಡಾ. ಉಮಾದೇವಿ ಹಿರೇಮಠ

ಮುಕ್ತಾಯಕ್ಕ ಸ್ವತಂತ್ರ ಮನೋಧರ್ಮದ ತಾತ್ವಿಕ ಚಿಂತನೆಯಿಂದಾಗಿ ಶರಣೆಯರಲ್ಲಿಯೇ ಸಾಧಕಳೆನಿಸಿಕೊಂಡಿದ್ದಾಳೆ. ಆತ್ಮಾನುಸಂಧಾನದಲ್ಲಿ ವಿಶ್ವಾಸ ಹೊಂದಿರುವ ಮುಕ್ತಾಯಕ್ಕ ಶ್ರೇಷ್ಠ ತತ್ವಚಿಂತಕಳು ಹೌದು. ಅಣ್ಣ ಅಜಗಣ್ಣ ಮಹಾಜ್ಞಾನಿ. ಗದಗ ಜಿಲ್ಲೆಯ ಲಕ್ಕುಂಡಿ ಜನ್ಮಸ್ಥಳವಾಗಿದ್ದು, ಗಂಡನ ಮನೆ 'ಮೊಸಳೆಕಲ್ಲು'. ಮುಂದೆ ಇಲ್ಲಿಯೇ ಸಾಯುಜ್ಯ ಹೊಂದಿದಳೆಂಬುದು ಶಾಂತಲಿಂಗದೇಶಿ ಕವಿಯ ಅಭಿಪ್ರಾಯವಾಗಿದೆ. ಮುಕ್ತಾಯಕ್ಕನ ವಚನಾಂಕಿತ 'ಮಹಾಘನ ಸೋಮೇಶ್ವರ' ವಾಗಿದೆ. ಸೋಮೇಶ್ವರ ಆರಾಧ್ಯ ದೈವವಾಗಿದ್ದು, ಲಕ್ಕುಂಡಿಯಲ್ಲಿ ಸೋಮೇಶ್ವರ ದೇವಸ್ಥಾನವಿದೆ. ಆ ಹಿನ್ನೆಲೆಯಲ್ಲಿ ಹುಟ್ಟೂರು ಲಕ್ಕುಂಡಿಯೇ ಎಂಬುದು ಸ್ಪಷ್ಟವಾಗಿದೆ. ಅಣ್ಣ ತಂಗಿಯರ ಪ್ರೀತಿ ಸಂಬಂಧವು ವಿಶೇಷವಾಗಿದೆ. ಲೌಕಿಕ ನೆಲೆಯನ್ನು ಮೀರಿ ಬಹುದೂರ ಸಾಗಿರುವಂತದ್ದು. ಅನುಭಾವದ ನೆಲೆಯಲ್ಲಿ ಬೆಳಗುವಂತದ್ದು. ನಾಲ್ಕು ಶೂನ್ಯ ಸಂಪಾದನೆಗಳಲ್ಲಿ ಮುಕ್ತಾಯಕ್ಕ ಮತ್ತು ಅಜಗಣ್ಣರ ನಡುವಿನ ಸಂಭಾಷಣೆಯನ್ನು ಕಟ್ಟಿಕೊಡುತ್ತವೆ. ಅಜಗಣ್ಣ ಲಿಂಗೈಕ್ಯನಾದಾಗ, ಮರಣದ ತೊಡಕನ್ನು ಬಿಡಿಸಲಾರದೆ ತೀವ್ರ ದುಃಖದಿಂದ ಪ್ರಲಾಪಿಸುತ್ತಿದ್ದಾಗ ಅಲ್ಲಮ ಪ್ರಭುಗಳು ಶರಣರ ಮರಣದ ಮಹತ್ವವನ್ನು ತಿಳಿಸಲು ಮನ ಕರಗಿದವರಾಗಿ ಮುಕ್ತಾಯಕ್ಕನಿಗೆ ಕಾಣಿಸಿಕೊಳ್ಳುತ್ತಾರೆ. ಅಲ್ಲಮಪ್ರಭು ಮತ್ತು ಮುಕ್ತಾಯಕ್ಕ ನಡುವಿನ ಸಂಭಾಷಣೆಯು ಶೂನ್ಯ ಸಂಪಾದನೆಗಳಲ್ಲಿ ಪ್ರಸ್ತುತವಾಗಿದೆ. ಅಲ್ಲಮರೊಂದಿಗಿನ ಮುಕ್ತಾಯಕ್ಕನ ತಾತ್ವಿಕ ಚರ್ಚೆಯು ಆಕೆಯ ಅನುಭಾವ ಪ್ರಪಂಚದ ವಿಸ್ತಾರವನ್ನು ತಿಳಿಸುತ್ತದೆ.

ಅಣ್ಣನ ಕಳೇಬರವನ್ನು ತೊಡೆಯ ಮೇಲಿಟ್ಟುಕೊಂಡು, ಮುಕ್ತಾಯಕ್ಕ ಅನುಭವಿಸುವ ಮತ್ತು ಅಭಿವ್ಯಕ್ತಿಸುವ ದುಃಖದ ಪರಿ ಸಾಮಾನ್ಯರ ರೀತಿಯಲ್ಲಿ ಇರದೆ, ಅನುಭಾವಲೋಕದ್ದಾಗಿದೆ.

**ಅರಿವಣಲೊಳಗಿಕ್ಕಿ ಅಗಿವುತಿದೆ ಲೋಕವೆಲ್ಲವು**
**ಅಳಿವು ಉಳಿಯಲರಿಯದೆ ಕೆಟ್ಟಿತ್ತು ಲೋಕವೆಲ್ಲವು**

ನಾನೆಂತು ಬದುಕುವೆನಣ್ಣ?
ಕತ್ತಲ ಬೆಳಗ ಕಾಣದ ಸಂದೇಹಿ ನಾನೊಬ್ಬಳು
ಎನ್ನ ಕಣ್ಣ ಕಟ್ಟ ಕನ್ನಡಿಯ ತೋರಿತ್ತೋ
ಅಜಗಣ್ಣ ನಿನ್ನ ವಿಯೋಗ

(ಮುಕ್ತಾಯಕ್ಕನ ವಚನಗಳು:ಶಿ.ಶ.ವ)

ಮೇಲಿನ ವಚನದಲ್ಲಿ ಎರಡು ರೂಪಕಗಳನ್ನು ನೋಡುತ್ತೇವೆ. ೧. ದವಡೆಯಲ್ಲಿ ಅರಿವನ್ನು ಅಗಿದು ನುಂಗುವುದು. ೨. ಕಣ್ಣು ಕಟ್ಟಿ ಕನ್ನಡಿ ತೋರುವುದು. ವಿಶಿಷ್ಟವಾದ ರೂಪಕ ಭಾಷೆಯಲ್ಲಿರುವ ವಚನ ಅನುಭಾವದ ಅತ್ಯಂತಿಕ ಸ್ವರೂಪವನ್ನು ಹೊಂದಿದೆ. ಬದುಕಿಗೆ ಬೇಕಾಗಿರುವ ಜ್ಞಾನವನ್ನು ಲೋಕವು ದವಡೆಯಲ್ಲಿಟ್ಟು ಅಗಿಯುತ್ತಿದೆ. ಜ್ಞಾನ ಲೋಕದ ಬೆಳಕಾಗಬೇಕು. ಸಾಧಕನ ಬದುಕು ಹಸನಾಗಬೆಕು. ಅಂತಹ ಅರಿವನ್ನೆ ತಿಂದು ಬದುಕಿದರೆ ಬದುಕಿಗೆ ಬರಿ ಕತ್ತಲೆಯೇ ಆವರಿಸುವುದು. ಇಂತಹ ಕತ್ತಲೆಯನ್ನೆ ಹೊಂದಿರುವ ಈ ಲೋಕದೊಂದಿಗೆ ನಾ ಹೇಗೆ ಬದುಕುವುದು ಅಣ್ಣಾ? ನೀನು ನನ್ನನ್ನು ಕತ್ತಲೆಯಿಂದ ಬೆಳಕಿನ ಕಡೆಗೆ ಕರೆದೊಯ್ಯುವ ಅರಿವು ಆಗಿದ್ದೆ. ನಿನ್ನ ಅಗಲಿಕೆಯಿಂದಾಗಿ ನನ್ನ ಪರಿಸ್ಥಿತಿ ಕಣ್ಣ ಕಟ್ಟಿ ಕನ್ನಡಿ ತೋರಿದಂತಾಗಿದೆ ಎಂದು ದುಃಖಿತಳಾಗಿದ್ದಾಳೆ. ಅಣ್ಣನ ಅನುಪಸ್ಥಿತಿಯು ಮುಕ್ತಾಯಕ್ಕನಿಗೆ ಅರಿವಿನ ವಿಸ್ತಾರದ ಕೊರತೆಯನ್ನು ಸೂಚಿಸಿದೆ. ಸಾಮಾನ್ಯರಂತೆ ಅನ್ನ-ಆಶ್ರಯದ ಚಿಂತೆ ಅವಳಿಗಿಲ್ಲ.

೧೨ನೇ ಶತಮಾನದಲ್ಲಿಯೇ ಅರಿವು, ಅನುಭಾವದ ಎತ್ತರದ ಚಿಂತನೆಗಳನ್ನು ಮುಕ್ತಾಯಕ್ಕನಲ್ಲಿ ಕಾಣುತ್ತೇವೆ. ಲೌಕಿಕ ನೆಲೆಯನ್ನು ಮೀರಿ ಅರಿವಿನ ನೆಲೆಯ ವಿಸ್ತಾರಕ್ಕೆ ಮುಖ ಮಾಡುವ ಅವರ ವಚನಗಳು ಮೋಹ, ಸ್ವಾರ್ಥ, ಮಮಕಾರಗಳಿಲ್ಲದ ಶುದ್ಧ ಭಾವ ಸಂಬಧಿಯಾಗೆವೆ.

ಆರೆಂದು ಕುರುಹ ಬೆಸಗೊಳಲು, ಏನೆಂದು ಹೇಳುವೆನಯ್ಯಾ
ಕಾಯದೊಳಗೆ ಮಾಯವಿಲ್ಲ
ಭಾವದೊಳಗೆ ಭ್ರಮೆಯಿಲ್ಲ
ಕರೆದು ಬೆಸಗೊಂಬಡೆ ಕುರುಹಿಲ್ಲ
ಒಬ್ಬರಿಗೂ ಹುಟ್ಟಿದೆ, ಅಯೋನಿಯಲ್ಲಿ ಬಂದು
ನಿರ್ಬುದ್ಧಿಯಾದವಳನೇನೆಂಬೆ ನಣ್ಣಾ
ತಲೆಯಳಿದು ನೆಲೆಗಟ್ಟು, ಬೆಳಗುವ ಜ್ಯೋತಿ
ಎನ್ನ ಅಜಗಣ್ಣ ತಂದೆಯ ಬೆನ್ನ ಬಳಿಯವಳಾನಯ್ಯಾ

ಗುರು ಕರುಣಿಸಿದ ಲಿಂಗವನ್ನೇ ಅಜಗಣ್ಣನೆಂದೇ ಭಾವಿಸಿದ ಮುಕ್ತಾಯಕ್ಕನಿಗೆ ಅಜಗಣ್ಣ ಬರಿ ಅಣ್ಣನಾಗಿರದೆ ಜೀವಾತ್ಮದ ನೆಲೆಯಿಂದ

ಪರಮಾತ್ಮನ ಅರಿವಿನ ಸಾಕಾರಕ್ಕೆ ಚೇತನವಾಗಿದ್ದನು. ಗುರು-ಶಿಷ್ಯರಾಗಿ, ಜೀವ-ಶಿವ ಸಂಬಂಧವಾಗಿದ್ದ ಅಲ್ಲಮ ಅಕ್ಕನ ಅಗಲಿಕೆ ಮುಕ್ತಾಯಕ್ಕನಲ್ಲಿ ಅಗಾಧ ದುಃಖವನ್ನುಂಟು ಮಾಡಿದೆ. 'ಅಜಗಣ್ಣ ತಂದೆಯುವಗಲಿ ನಾನೆಂತು ಸೈರಿಸುವೆ ನಾನೆಂತು ಬದುಕುವೆನಣ್ಣಾ' ಎಂದು ತನ್ನ ಬದುಕಿನ ಅರಿವಿನ ಬೆಳಕು ಕಳೆದದ್ದಕ್ಕಾಗಿ ಚಿಂತಿಸುತ್ತಿದ್ದಾಳೆ. ಕಾಯದ ಸೀಮೆ, ಭಾವದ ಭ್ರಾಂತಿ, ಸಾಕಾರ-ನಿರಾಕಾರ, ದ್ವೈತ-ಅದ್ವೈತದ, ನಾ-ನೀ ಎಂಬ ಭಿನ್ನ ಜ್ಞಾನದ ಅಂಧಕಾರದಲ್ಲಿ ಒದ್ದಾಡುತ್ತಿರುವ ಜೀವದಂತೆ ಮುಕ್ತಾಯಕ್ಕ ಪ್ರಭುದೇವರಿಗೆ ಕಾಣಿಸುತ್ತಾಳೆ. ಅಜಗಣ್ಣನ ಭೌತಿಕ ದೇಹದ ಮರೆಯಿಂದ ದುಃಖಿಸುತ್ತಿರುವ ಮುಕ್ತಾಯಕ್ಕನಿಗೆ ಜನನ, ಮರಣದ ಸ್ವರೂಪ, ಪರಮಾತ್ಮನಿಂದ ಬಂದ ಜೀವಾತ್ಮ ಮತ್ತೆ ಅದೇ ಪೂರ್ಣ ತತ್ವದಲ್ಲಿ ಒಂದಾಗುವ ಪರಿಯನ್ನು, ಸತ್ಯವನ್ನು ವಿವರಿಸಲು ಅಲ್ಲಮ ಪ್ರಭುಗಳು ಮುಂದಾಗುತ್ತಾರೆ. ಮುಕ್ತಾಯಕ್ಕನಲ್ಲಿ ಉಂಟಾಗಿರುವ ಭಾವ ಭ್ರಾಂತಿಯನ್ನು ಮೀರುವಂತೆ ಹೇಳುತ್ತಾರೆ. ಪ್ರಭುದೇವರ ಬಯಲು ಪರಿಕಲ್ಪನೆಗೆ ಸಮ್ಮತಿಸದ ಮುಕ್ತಾಯಕ್ಕ ಮುಂದುವರೆದು ಹೇಳುವ ವಚನ

ತನುವಿನೊಳಗೆ ತನುವಾಗಿ, ಮನದೊಳಗೆ ಮನವಾಗಿ
ಪ್ರಾಣದೊಳಗೆ ಪ್ರಾಣವಾಗಿಪ್ಪುದೆಂದಡೆ
ಕೆಲಬರಿಗೆ ಅರಿಯದಿಪ್ಪುದೆ
ಮನಮುಟ್ಟುವುದನ್ನಕ್ಕರ ಕಾಣಬಾರದು
ಬಹಿರಂಗದಲಿ ಅದೆ ಎಂದಡೇನು
ಪೂಜಿಸುವನ್ನಕ್ಕರ ಕಾಣಬಾರದು
ಸಾಕಾರವಲ್ಲದ ನಿರಾಕಾರ ಲಿಂಗವು
ವ್ಯಾಕುಲವುಳ್ಳನ್ನಕ್ಕರ ಸಾಧ್ಯವಾಗದು (ಶಿ.ಶ.ವ.)

ಬಹಿರಂಗದಲ್ಲಿ ಸಾಕಾರ ರೂಪದಲ್ಲಿಯೂ, ಅಂತರಂಗದಲ್ಲಿ ನಿರಾಕಾರ ಸ್ವರೂಪನಾಗಿರುವ ಪರಮಾತ್ಮನ ಅನುಸಂಧಾನಗೈಯುವ ತನ್ನ ವಿಚಾರವನ್ನು ಪ್ರತಿಪಾದಿಸುತ್ತಾ ಎನ್ನ ಮನದೊಳಗೆ ಘನವನನುಗೊಳಿಸಿ ತೋರುವರಿಲ್ಲದ ಕಾರಣ ತಾನು ದುಃಖಿಯಾಗಿದ್ದೇನೆ ಎನ್ನುತ್ತಾಳೆ. 'ನಿನಗೆ ನೀನೇ ಗುರುವಲ್ಲದೆ, ನಿನ್ನಿಂಧಧಿಕವಪ್ಪ ಗುರುವುಂಟೆ' ತನ್ನಿಂದ ತಾನೇ ಅರಿಯಬೇಕು ಎಂಬ ಪ್ರಭುದೇವರ ಮಾತಿಗೆ ಆತ್ಮಜ್ಞಾನಿಯಾದವನಿಗೆ ಮಾತ್ರ 'ಅರಿವು' ಗುರುವಾಗಬಹುದು, ಆದರೆ ಸಾಧಕ ಭಕ್ತರಿಗೆ ಬಹಿರಂಗದ ಗುರುವಿನ ಅವಶ್ಯಕತೆ ಇದೆ ಹೀಗೆ ಹಲವಾರು ಪ್ರಶ್ನೆಗಳು ಮುಕ್ತಾಯಕ್ಕನಲ್ಲಿ ಸುಳಿಯುತ್ತವೆ

ತನ್ನ ತಾನರಿದವಂಗೆ ಅರಿವೆ ಗುರು
ಅರಿವರತು ಮರಹು ನಷ್ಟವಾದಲ್ಲಿ ದೃಷ್ಟನಷ್ಟವೇ ಗುರು

ದೃಷ್ಟನಷ್ಟವೇ ಗುರು ತಾನಾದಲ್ಲಿ
ಮುಟ್ಟ ತೋರಿದವರಿಲ್ಲದಡೇನು
ಸಹಜವ ನೆಲೆಗೊಳಿಸುವ ನಿರ್ಣಯ ನಿಷ್ಪತ್ತಿಯೇ ಗುರು ನೋಡಾ
ಗುರು ತಾನಾದಡೂ ಗುರುವಿಡಿದಿರಬೇಕು ಎನ್ನ ಅಜಗಣ್ಣನಂತೆ

ಮುಕ್ತಾಯಕ್ಕನ ಸಾಕಾರ ಗುರುವಿನ ನಿಷ್ಠೆಯನ್ನು, ಆಕೆಯ ಅರಿವಿನ ಮಿತಿಯನ್ನು ಅರಿತ ಅಲ್ಲಮ ಪ್ರಭುದೇವರು 'ಅರಿವು ಸಯವಾಗಿ ಮರಹು ನಷ್ಟವಾದಡೆ ಗುಹೇಶ್ವರ ಲಿಂಗ ತಾನೇ ನೋಡಾ' ಎಂಬ ವಿಚಾರವನ್ನು ಹೇಳಿದರೂ ಮುಕ್ತಾಯಕ್ಕ ತನ್ನ ನಿಲುವು ಪ್ರತಿಪಾದನೆಗೆ ಮುಂದುವರೆಯುತ್ತಾಳೆ. ವಿಚಾರವಂತಳಾದ ಮುಕ್ತಾಯಕ್ಕ ಪ್ರಭುದೇವರ ನಿಲುವನ್ನು ಪ್ರಶ್ನಿಸುತ್ತಾಳೆ. ಹೀಗೆ ಹಲವು ವಿಷಯಗಳ ಸುತ್ತ ಚರ್ಚೆ, ಸಂವಾದಗಳು ಮುಂದುವರೆಯುತ್ತವೆ. ಮುಕ್ತಾಯಕ್ಕನ ಜ್ಞಾನದ ಎತ್ತರವನ್ನು ಕಂಡು ಅಲ್ಲಮರು ಸಂತೋಷಿಸುತ್ತಾರೆ. ಕೊನೆಗೆ ಪ್ರಭುದೇವರ ಮಹತ್ವವನ್ನರಿತು, ಅವರ ಉಪದೇಶ ಬಲದಿಂದ ನಿರ್ವಯಲ ಸಮಾಧಿಯನ್ನು ಪಡೆದು ಅದ್ವೈತವನ್ನು ಸಾಧಿಸಿದಳು.

ತಾತ್ವಿಕ ನಿಲುವು, ಜಿಜ್ಞಾಸೆಗಳಿಂದಾಗಿ ವಿಶಿಷ್ಟಳೆನಿಸಿರುವ ಮುಕ್ತಾಯಕ್ಕನ ವಚನಗಳಲ್ಲಿ ಭಾವಪೂರ್ಣತೆಯ ವಚನಗಳು ಕಾವ್ಯದ ಸೊಗಸಿನಿಂದ ಕೂಡಿವೆ.

ಅಂಧಕನ ಕೈಯ ಅಂಧಕ ಹಿಡಿದಂತಿರಬೇಕು
ಮೂಗನ ಕೈಯಲಿ ಕಾವ್ಯವ ಕೇಳಿದಂತಿರಬೇಕು
ದರ್ಪಣದೊಳಗಣ ಪ್ರತಿಬಿಂಬದಂತಿರಬೇಕು
ಹಿಡಿದವನರಿಗಳವಲ್ಲದಿರಬೇಕು ಅಣ್ಣಾ
ಕೂರ್ಮನ ಶಿಶುವಿನ ಸ್ನೇಹದಂತೆ ಇರಲೊಲ್ಲದೆ
ಆರೂಢಿಗೆಟ್ಟೆಯೋ ಅಜಗಣ್ಣ

ಆತ್ಮ- ಪರಮಾತ್ಮ ಸಂಬಂಧದ ನಿರಂತರತೆಯ, ಸಾಮರಸ್ಯದ ಅನುಸಂಧಾನವನ್ನು 'ಕೂರ್ಮನ ಶಿಶುವಿನ ಸ್ನೇಹ' ಪರಿಣಾಮಕಾರಿಯಾಗಿ ಚಿತ್ರಿಸಿದೆ. ಜೀವ, ಶಿವನಲ್ಲಿ ಒಂದಾಗುವ ಅತ್ಯಂತಿಕ ಎತ್ತರವನ್ನು ಸೃಷ್ಟಿಯ ಸೂತ್ರದಲ್ಲಿ ವಿವರಿಸುವ ವಚನಗಳು ಸಾದೃಶ್ಯಗಳಿಂದ ಭಾವಪೂರ್ಣವಾಗಿವೆ. ಅಜಗಣ್ಣನಿಗೆ ಮುಕ್ತಾಯಕ್ಕ ಅನುಭಾವಿಯಾಗಿದ್ದಳು. ಅನುಭಾವದ ಬೆಳಕಾಗಿ, ಅದರ ಸೂಕ್ಷ್ಮತೆ, ಮಾತು ಮೌನಗಳ ತಾತ್ವಿಕತೆ, ಜನನ ಮರಣಗಳನ್ನು ವೈಚಾರಿಕವಾಗಿ ಸ್ಪಷ್ಟಪಡಿಸುವ ಅವಳ ಜಾಣ್ಮೆಯಿಂದಾಗಿ ವಚನಕಾರರಲ್ಲಿಯೇ ಬಹಳ ವಿಶಿಷ್ಟವಾಗಿ ಗುರುತಿಸಿಕೊಂಡಿದ್ದಾಳೆ. ಅಜಗಣ್ಣನ ಶಿವಯೋಗದ ನೆಲೆ, ಆರೂಢತ್ವ, ಭಕ್ತಿ-ವಿರಕ್ತಿಗಳನ್ನು ಅಳವಡಿಸಿಕೊಂಡ ಸಾಧಕಿಯಾಗಿದ್ದಾಳೆ. ಅಜಗಣ್ಣ ಮತ್ತು ಮುಕ್ತಾಯಕ್ಕ ಇವರೀರ್ವರ ಅನುಭಾವದ ಬೆಳಕು ದಿವ್ಯದ ಬೆಳಕು.

ಈ ರೀತಿಯಾಗಿ ಅನೇಕ ಶಿವಶರಣೆಯರು ಮಹಾಜ್ಞಾನಿಗಳಾಗಿ, ಷಟ್ಸ್ಥಲ ಸಾಧನಾ ಮಾರ್ಗಗಳನ್ನು ಅಳವಡಿಸಿಕೊಂಡು ಲೋಕಕ್ಕೆ ಮಾದರಿಯಾಗಿದ್ದಾರೆ. ಹೆಣ್ಣು ಮಾಯೆ, ಮನೆ ಕೆಲಸದ ತೊತ್ತು ಎಂಬ ಭಾವನೆಯನ್ನು ಮೀರಿ, ಅವಳು ಜ್ಞಾನವನ್ನು ಉಪದೇಶಿಸಬಲ್ಲ ಮಹಾ ಅನುಭಾವಿ ಎಂಬುದನ್ನು ವಚನ ಧರ್ಮ ಸಾರಿದೆ ಮತ್ತು ಗೌರವಿಸಿದೆ. ದೇಹ ಕಾರಣವಾಗಿ ಬರುವ ಮಲತ್ರಯಗಳು, ವಿಕಾರಗಳನ್ನು ಕಳೆದುಕೊಂಡರೆ ಮಹಿಳೆಗೂ ಸ್ವಸ್ವರೂಪ ಜ್ಞಾನವುಂಟಾಗಿ ಲಿಂಗೈಕ್ಯ, ಶಿವೈಕ್ಯಗಳು ಪ್ರಾಪ್ತಿಯಾಗುತ್ತವೆ. ಅಕ್ಕಮಹಾದೇವಿ, ಮುಕ್ತಾಯಕ್ಕ ಮೊದಲಾದ ಶರಣೆಯರು ಶಿವಯೋಗವನ್ನು ಸಾಧಿಸಿದ್ದಾರೆ.